# ಕರ್ನಾಟಕ ವಿಧಾನ ಪರಿಷತ್

| | |
|---|---|
| 1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1083 |
| 2) ಸದಸ್ಯರ ಹೆಸರ | ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಯಿಂದ ಚುನಾಯಿತರಾದವರು) |
| 3) ಉತ್ತರಿಸುವ ದಿನಾಂಕ | 12.03.2026 |
| 4) ಉತ್ತರಿಸುವವರು | ಮಾನ್ಯ ಮುಖ್ಯಮಂತ್ರಿಗಳು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಳೆದ ಮೂರು ಆರ್ಥಿಕ ವರ್ಷಗಳಲ್ಲಿ ರಾಜ್ಯ ಸರ್ಕಾರ ಪಡೆದ ಒಟ್ಟು ಸಾಲ ಎಷ್ಟು; ಪ್ರಸ್ತುತ ರಾಜ್ಯದ ಒಟ್ಟು ಸಾರ್ವಜನಿಕ ಸಾಲದ ಪ್ರಮಾಣ ಎಷ್ಟು; ಇದರಿಂದಾಗಿ ಪ್ರತಿಯೊಬ್ಬ ನಾಗರಿಕನ ಮೇಲಿನ ತಲಾ ಸಾಲದ ಹೊರೆ ಎಷ್ಟು ರೂಪಾಯಿಗಳಾಗಿವೆ; (ವರ್ಷವಾರು ವಿವರವನ್ನು ನೀಡುವುದು)</td><td>ಕಳೆದ ಮೂರು ಆರ್ಥಿಕ ವರ್ಷಗಳಲ್ಲಿ ರಾಜ್ಯ ಸರ್ಕಾರ ಪಡೆದ ಒಟ್ಟು ಸಾಲದ ವಿವರಗಳು ಕೆಳಕಂಡಂತಿದೆ<br>ರೂ.ಕೋಟಿಗಳಲ್ಲಿ<br><table><tr><th>ವರ್ಷ</th><th>ಒಟ್ಟು ಸಾಲ</th></tr><tr><td>2022-23</td><td>44,549</td></tr><tr><td>2023-24</td><td>90,280</td></tr><tr><td>2024-25</td><td>1,03,342</td></tr><tr><td>ಒಟ್ಟು</td><td>2,38,170</td></tr></table><br>2026 ಫೆಬ್ರುವರಿವರೆಗೆ ರಾಜ್ಯ ಸರ್ಕಾರದ ಬಾಕಿ ಉಳಿದಿರುವ ಒಟ್ಟು ಸಾರ್ವಜನಿಕ ಸಾಲವು 5,71,921 ಕೋಟಿ ರೂ.ಗಳಷ್ಟಿದ್ದು, ರಾಜ್ಯದ ಪ್ರತಿಯೊಬ್ಬ ನಾಗರಿಕನ ಮೇಲಿನ ತಲಾ ಸಾಲದ ಹೊರೆ 83,146 ರೂ.ಗಳಿರುತ್ತದೆ.</td></tr>
<tr><td>ಆ)</td><td>ಸರ್ಕಾರವು ಪಡೆದ ಸಾಲದಲ್ಲಿ ಎಷ್ಟು ಮೊತ್ತ ಅಭಿವೃದ್ಧಿ ಯೋಜನೆಗಳಿಗೆ ಹಾಗೂ ಎಷ್ಟು ಮೊತ್ತ ಆಡಳಿತಾತ್ಮಕ ವೆಚ್ಚಗಳಿಗೆ ಬಳಸಲಾಗಿದೆ (ವಿಭಾಗವಾರು ವಿವರ ನೀಡುವುದು)</td><td>ರಾಜ್ಯ ಸರ್ಕಾರ ಪಡೆಯುವ ಸಾಲವನ್ನು ಮುಖ್ಯವಾಗಿ ಬಂಡವಾಳ ಯೋಜನೆಗಳಿಗೆ, ಸರ್ಕಾರದ ಹಿಂದಿನ ಸಾಲಗಳ ಮರುಪಾವತಿಗೆ ಹಾಗೂ ರಾಜಸ್ವ ಕೊರತೆ ಉಂಟಾದಲ್ಲಿ, ರಾಜಸ್ವ ಕೊರತೆ ಭರಿಸಲು ಬಳಕೆ ಮಾಡಲಾಗುತ್ತದೆ.<br><br>ಕೇಂದ್ರ ಸರ್ಕಾರದ ತೆರಿಗೆ ನೀತಿಯಿಂದ ಹಾಗೂ 15ನೇ ಹಣಕಾಸು ಆಯೋಗದ ಶಿಫಾರಸ್ಸಿನಲ್ಲಿ ರಾಜ್ಯದ ತೆರಿಗೆ ಹಂಚಿಕೆ ಕಡಿಮೆಯಾದ ಕಾರಣ ರಾಜ್ಯವು 2023-24ರಿಂದ ರಾಜಸ್ವ ಕೊರತೆಯನ್ನು ಎದುರಿಸಬೇಕಾಯಿತು. ಆದ್ದರಿಂದ 2023-24ನೇ ಸಾಲಿನಿಂದ ರಾಜಸ್ವ ಕೊರತೆ ಭರಿಸಲು ರಾಜ್ಯ ಸರ್ಕಾರ ಸಾಲಗಳನ್ನು ಬಳಕೆ ಮಾಡಿರುತ್ತದೆ.</td></tr>
<tr><td>ಇ)</td><td>ಹಣಕಾಸು ಹೊಣೆಗಾರಿಕೆ ಮತ್ತು ಬಜೆಟ್ ನಿರ್ವಹಣಾ ನಿಯಮಾವಳಿಗಳ (FRBM) ಮಿತಿಗಳನ್ನು ಸರ್ಕಾರವು ಪಾಲಿಸುತ್ತಿದೆಯೇ; ಮೀರಿದ್ದರೆ ಅದಕ್ಕೆ ಕಾರಣಗಳೇನು;</td><td>ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮದಲ್ಲಿ ರಾಜ್ಯ ಸರ್ಕಾರವು ರಾಜಸ್ವ ಹೆಚ್ಚುವರಿಯನ್ನು ಹೊಂದಿರಬೇಕು; ವಿತ್ತೀಯ ಕೊರತೆ ಜಿ.ಎಸ್.ಡಿ.ಪಿಯ ಶೇ.3ರ ಮಿತಿಯೊಳಗಿರಬೇಕು; ಮತ್ತು ಒಟ್ಟು ಹೊಣೆಗಾರಿಕೆ ಜಿ.ಎಸ್.ಡಿ.ಪಿಯ ಶೇ.25ರ ಮಿತಿಯೊಳಗಿರಬೇಕು ಎಂದು ಸೂಚಿಸಿರಲಾಗಿರುತ್ತದೆ.<br><br>ರಾಜಸ್ವ ಹೆಚ್ಚುವರಿ<br>ರಾಜ್ಯವು 2004 ರಿಂದ 2019-20ರವರೆಗೆ ಮತ್ತು 2021-22 ಹಾಗೂ 2022-23ರಲ್ಲಿ ರಾಜಸ್ವ ಹೆಚ್ಚುವರಿಯನ್ನು ಸಾಧಿಸಿರುತ್ತದೆ.<br>2020-21ರಲ್ಲಿ ಕೋವಿಡ್ ಸಾಂಕ್ರಾಮಿಕದ ಕಾರಣ ರಾಜ್ಯದ ರಾಜಸ್ವ ಸಂಗ್ರಹಣೆ ಕಡಿಮೆಯಾಗಿದ್ದು, ರಾಜಸ್ವ ಕೊರತೆ ಉಂಟಾಗಿರತ್ತದೆ.<br><br>ಕೇಂದ್ರ ಸರ್ಕಾರ 2023-24ರಿಂದ ಜಿ.ಎಸ್.ಟಿ ಪರಿಹಾರ ಸ್ಥಗಿತಗೊಳಿಸಿದ್ದರಿಂದ, ರಾಜಸ್ವ ಸಂಗ್ರಹಣೆ ಕಡಿಮೆಯಾಗಿರುತ್ತದೆ. ಕೇಂದ್ರ ಸರ್ಕಾರ ಅಂದಾಜಿಸಿದ್ದ ಜಿ.ಎಸ್.ಟಿ ಸಂಗ್ರಹಣೆಗೆ (Protected Revenue) ಹೋಲಿಸಿದರೆ, ರಾಜ್ಯದ ಜಿ.ಎಸ್.ಟಿ ಸಂಗ್ರಹಣೆಯು 2023-24ರಲ್ಲಿ 30,871 ಕೋಟಿ ರೂ.ಗಳು ಮತ್ತು 2024-25ರಲ್ಲಿ 40,368 ಕೋಟಿ ರೂ.ಗಳು ಕೊರತೆಯಾಗಿರುತ್ತದೆ.</td></tr>
</table>

ಜಿ.ಎಸ್.ಟಿ ಸಂಗ್ರಹಣೆಯಲ್ಲಿನ ಈ ಕೊರತೆಯನ್ನು ಸರಿದೂಗಿಸಲು ಕೇಂದ್ರ ಸರ್ಕಾರ ಪರಿಹಾರ ನೀಡದ ಕಾರಣ ರಾಜ್ಯವು ರಾಜಸ್ವ ಕೊರತೆ ಎದುರಿಸಬೇಕಾಯಿತು.

ಇದಲ್ಲದೆ ಕೇಂದ್ರ ಸರ್ಕಾರವು ಅನಿರೀಕ್ಷಿತವಾಗಿ ಜಿ.ಎಸ್.ಟಿ ದರ ತರ್ಕಬದ್ಧಗೊಳಿಸಿದ ಕಾರಣ ರಾಜ್ಯದ ರಾಜಸ್ವ ಸಂಗ್ರಹಣೆಯು ಮತ್ತಷ್ಟು ಇಳಿಕೆಯಾಗಿದೆ. 2025-26ನೇ ಸಾಲಿನಲ್ಲಿ ಜಿ.ಎಸ್.ಟಿ ತರ್ಕಬದ್ಧಗೊಳಿಸುವಿಕೆಗೂ ಮುನ್ನ, ರಾಜ್ಯದ ಸರಾಸರಿ ಮಾಸಿಕ ಜಿ.ಎಸ್.ಟಿ ರಾಜಸ್ವ ಸಂಗ್ರಹಣೆಯು ಶೇ.10ರಷ್ಟು ಬೆಳವಣಿಗೆಯನ್ನು ದಾಖಲಿಸಿತ್ತು. ಆದರೆ ದರ ತರ್ಕಬದ್ಧಗೊಳಿಸುವಿಕೆಯ ನಂತರ, ಜಿ.ಎಸ್.ಟಿ ಸಂಗ್ರಹಣೆಯ ಮಾಸಿಕ ಬೆಳವಣಿಗೆಯು ಶೇ.4ಕ್ಕೆ ಕಡಿಮೆಯಾಗಿದೆ. ಪ್ರಸ್ತಾವಿತ ದರ ಪರಿಷ್ಕರಣೆಯಿಂದ ಪ್ರಸಕ್ತ ಸಾಲಿಗೆ ರಾಜ್ಯದ ಜಿ.ಎಸ್.ಟಿ ಸಂಗ್ರಹಣೆಯು ಅಂದಾಜು 10,000 ಕೋಟಿ ರೂ.ಗಳು ಕೊರತೆ ಉಂಟಾಗಿದೆ ಹಾಗೂ ಮುಂದಿನ ವರ್ಷಕ್ಕೆ 15,000 ಕೋಟಿ ರಾಜಸ್ವ ನಷ್ಟವನ್ನು ಅಂದಾಜಿಸಲಾಗಿದೆ.

15ನೇ ಹಣಕಾಸು ಆಯೋಗವು ರಾಜ್ಯದ ತೆರಿಗೆ ಪಾಲನ್ನು ಕಡಿಮೆ ಮಾಡಿದ ಕಾರಣ ರಾಜ್ಯಕ್ಕೆ 6 ವರ್ಷಗಳ ಅವಧಿಯಲ್ಲಿ (2020-21 ರಿಂದ 2025-26 ರವರೆಗೆ ) ಸುಮಾರು 65,000 ಕೋಟಿ ರೂ.ಗಳಷ್ಟು ತೆರಿಗೆ ನಷ್ಟವಾಗಿರುತ್ತದೆ. 2025-26ನೇ ಸಾಲಿಗೆ ಸುಮಾರು 14,000 ಕೋಟಿ ರೂ.ಗಳು ತೆರಿಗೆ ನಷ್ಟವಾಗಿರುತ್ತದೆ.

ಕೇಂದ್ರ ಸರ್ಕಾರದ ತೆರಿಗೆ ನೀತಿಯಿಂದ ಹಾಗೂ 15ನೇ ಹಣಕಾಸು ಆಯೋಗದ ಶಿಫಾರಸ್ಸಿನಲ್ಲಿ ರಾಜ್ಯದ ತೆರಿಗೆ ಹಂಚಿಕೆ ಕಡಿಮೆಯಾದ ಕಾರಣ ರಾಜ್ಯವು 2023-24ರಿಂದ ರಾಜಸ್ವ ಕೊರತೆಯನ್ನು ಎದುರಿಸಬೇಕಾಯಿತು.

**ವಿತ್ತೀಯ ಕೊರತೆ**

ರಾಜ್ಯದ ವಿತ್ತೀಯ ಕೊರತೆಯನ್ನು ಈವರೆಗೂ ಜಿ.ಎಸ್.ಡಿ.ಪಿಯ ಶೇ.3ರ ಮಿತಿಯೊಳಗೆ ಪಾಲನೆ ಮಾಡಲಾಗಿರುತ್ತದೆ. ಆದರೆ, ಆರ್ಥಿಕ ವರ್ಷ 2009-10ರಲ್ಲಿ ಆರ್ಥಿಕ ಮಂದಗತಿಯ ಕಾರಣದಿಂದ ಹಾಗೂ 2020-21ರಲ್ಲಿ ಕೋವಿಡ್ ಸಾಂಕ್ರಾಮಿಕದ ಕಾರಣ ವಿತ್ತೀಯ ಕೊರತೆಯು ಶೇ.3ಕ್ಕಿಂತ ಹೆಚ್ಚಾಗಿರುತ್ತದೆ. ಈ ಎರಡು ವರ್ಷಗಳಲ್ಲಿ ಕೇಂದ್ರ ಸರ್ಕಾರವು ರಾಜ್ಯಗಳಿಗೆ ವಿತ್ತೀಯ ಕೊರತೆಯ ಮಿತಿಯನ್ನು ಸಡಿಲಗೊಳಿಸಿರುತ್ತದೆ. ಈ ಎರಡು ವರ್ಷಗಳನ್ನು ಹೊರತುಪಡಿಸಿ ರಾಜ್ಯ ಸರ್ಕಾರವು ವಿತ್ತೀಯ ಕೊರತೆಯನ್ನು ಜಿ.ಎಸ್.ಡಿ.ಪಿಯ ಶೇ.3ರ ಮಿತಿಯೊಳಗೆ ಪಾಲನೆ ಮಾಡಿರುತ್ತದೆ.

**ಒಟ್ಟು ಹೊಣೆಗಾರಿಕೆ**

ರಾಜ್ಯದ ಒಟ್ಟು ಹೊಣೆಗಾರಿಕೆಯನ್ನು ಜಿ.ಎಸ್.ಡಿ.ಪಿಯ ಶೇ.25ರ ಮಿತಿಯೊಳಗೆ ಪಾಲನೆ ಮಾಡಲಾಗಿರುತ್ತದೆ.

ಈ) ರಾಜ್ಯದ ಆದಾಯ ವೃದ್ಧಿಗೆ, ತೆರಿಗೆ ಸಂಗ್ರಹ ಸಾಮರ್ಥ್ಯ ಹೆಚ್ಚಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು;

ರಾಜ್ಯದ ಒಟ್ಟಾರೆ ವೆಚ್ಚ ನಿರ್ವಹಣೆಗಾಗಿ ಸರ್ಕಾರವು ಅಗತ್ಯ ಸಂಪನ್ಮೂಲ ಕ್ರೋಢೀಕರಣದ ಕ್ರಮಗಳನ್ನು ಕೈಗೊಂಡಿರುತ್ತದೆ.

ನಮ್ಮ ರಾಜ್ಯದ ಸ್ವಂತ ತೆರಿಗೆ ಹಾಗೂ ತೆರಿಗೆಯೇತರ ಸ್ವೀಕೃತಿಗಳಿ ಸಂಬಂಧಿಸಿದಂತೆ ಹಲವು ವರ್ಷಗಳಿಂದ ತೆರಿಗೆ ದರಗಳು ಹಾಗೂ ಬಳಕೆದಾರರ ಶುಲ್ಕಗಳು ಪರಿಷ್ಕರಣೆಯಾಗಿರುವುದಿಲ್ಲ. ಅಲ್ಲದೆ, ನೆರೆ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ರಾಜ್ಯದಲ್ಲಿ ವಿಧಿಸುತ್ತಿರುವ ತೆರಿ ದರಗಳು ಕಡಿಮೆಯಿದ್ದು, ಇದರಿಂದ ರಾಜ್ಯಕ್ಕೆ ತೆರಿಗೆ ನಷ್ಟ ಉಂಟಾಗುತ್ತಿದೆ. ಆದ್ದರಿಂದ ನಮ್ಮ ಸರ್ಕಾರವು ತೆರಿಗೆ ದರಗಳನ್ನು ಪರಿಷ್ಕರಣೆ ಮಾಡುವ ಮೂಲಕ ರಾಜ್ಯದ ರಾಜಸ್ವ ಸಂಗ್ರಹಣೆಯನ್ನು ಹೆಚ್ಚಿಸುವ ಕ್ರಮ ಕೈಗೊಂಡಿರುತ್ತದೆ.

ಅಲ್ಲದೆ, ತೆರಿಗೆ ದರಗಳ ಪರಿಷ್ಕರಣೆಯಿಂದ ಜನಸಾಮಾನ್ಯರಿಗೆ ಹೊರೆಯಾಗದಂತೆ ಸರ್ಕಾರವು ಎಚ್ಚರವಹಿಸಿರುತ್ತದೆ. ದರ ಪರಿಷ್ಕರಣೆಯ ನಂತರವೂ ಇತರ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ರಾಜ್ಯದಲ್ಲಿ ಪೆಟ್ರೋಲ್ ಡಿಸೆಲ್ ಬೆಲೆಗಳಾಗಲಿ, ಮಾರ್ಗಸೂಚಿ ದರಗಳಲ್ಲಿ ಹಾಗೂ ನೋಂದಣಿ ಶುಲ್ಕಗಳು ಕಡಿಮೆಯೇ ಇರುತ್ತದೆ. ಅಂತೆಯೇ ಸರ್ಕಾರ ಒದಗಿಸುವ ಸೇವೆಗಳಿಗೆ ವಿಧಿಸುವ ಬಳಕೆದಾರರ ಶುಲ್ಕ, ಸೇವಾ ಶುಲ್ಕಗಳನ್ನು ಜನರ ಜೀವನ ಮಟ್ಟವನ್ನು ಆಧರಿಸಿ ಕಾಲಾನುಕ್ರಮವಾಗಿ ಪರಿಷ್ಕರಣೆ ಮಾಡುವ ಕ್ರಮವಹಿಸಿದೆ.

ರಾಜ್ಯ ಸರ್ಕಾರವು ಹೆಚ್ಚಿನ ಸಂಪನ್ಮೂಲ ಕ್ರೋಢೀಕರಿಸಲು ಸಂಪನ್ಮೂಲ ಕ್ರೋಢೀಕರಣ ಸಮಿತಿಯನ್ನು ರಚಿಸಿರುತ್ತದೆ. ಸಮಿತಿಯು ರಾಜ್ಯದ ರಾಜಸ್ವ ಸಂಗ್ರಹಣೆಗೆಯನ್ನು ಹೆಚ್ಚಿಸಲು ಶಿಫಾರಸು ಮಾಡಿರುತ್ತದೆ. ಮುಖ್ಯವಾಗಿ, (i) ರಾಜ್ಯ ತೆರಿಗೆ ಆದಾಯವನ್ನು ಬಲಪಡಿಸುವುದು, (ii) ಬಳಕೆದಾರ ಶುಲ್ಕ ಸುಧಾರಣೆಗಳ ಮೂಲಕ ತೆರಿಗೆಯೇತರ ಆದಾಯವನ್ನು ಹೆಚ್ಚಿಸುವುದು ಹಾಗೂ ಸಾರ್ವಜನಿಕ ಆಸ್ತಿಗಳಿಂದ ಸುಧಾರಿತ ಆದಾಯ ಸಂಗ್ರಹಣೆ ಸಾಧಿಸುವುದು, (iii) ಸ್ಥಳೀಯ ಸಂಸ್ಥೆಗಳ ಸ್ವಂತ ರಾಜಸ್ವವನ್ನು ವೃದ್ಧಿಸುವುದು ಮತ್ತು (iv) ಸಾಂಸ್ಥಿಕ ಸುಧಾರಣೆಗಳು ಹಾಗೂ ಅನುಸರಣೆ ಸಾಮರ್ಥ್ಯ ಹೆಚ್ಚಿಸುವುದು ಸೇರಿದಂತೆ ಇತರ ಪ್ರಮುಖ ಅಂಶಗಳ ಕುರಿತು ಶಿಫಾರಸುಗಳನ್ನು ನೀಡಿದೆ. ಅಬಕಾರಿ ಸುಧಾರಣೆಗಳಿಗೆ ಸಂಬಂಧಿಸಿದಂತೆ ಸಮಿತಿಯ ಎರಡನೇ ವರದಿಯನ್ನು 2025-26ರ ಆರ್ಥಿಕ ವರ್ಷದ ಅಂತ್ಯದೊಳಗೆ ಸಲ್ಲಿಸುವ ನಿರೀಕ್ಷೆಯಿದೆ.

ರಾಜ್ಯ ಸರ್ಕಾರವು ಮುಂದಿನ ಆರ್ಥಿಕ ವರ್ಷದಲ್ಲಿ ಸಮಿತಿಯ ಶಿಫಾರಸುಗಳನ್ನು ಸಮಗ್ರವಾಗಿ ಪರಿಶೀಲಿಸಿ ರಾಜ್ಯದ ವಿತ್ತೀಯ ಕಾರ್ಯತಂತ್ರದಲ್ಲಿ ಸೂಕ್ತವಾಗಿ ಅಳವಡಿಸಿಕೊಳ್ಳಲಿದೆ.

ಉ) ಹೆಚ್ಚುತ್ತಿರುವ ಸಾಲದ ಬಡ್ಡಿ ಪಾವತಿಗಾಗಿ ವರ್ಷಕ್ಕೆ ಎಷ್ಟು ಮೊತ್ತ ವೆಚ್ಚವಾಗುತ್ತಿದೆ, ಇದರಿಂದ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿದೆಯೇ;

ಕಳೆದ ಮೂರು ವರ್ಷಗಳಲ್ಲಿ ರಾಜ್ಯ ಸರ್ಕಾರದ ಬಡ್ಡಿ ಪಾವತಿ ವೆಚ್ಚವು ಕೆಳಕಂಡಂತಿದೆ.

ರೂ.ಕೋಟಿಗಳಲ್ಲಿ

| ವರ್ಷ | ಒಟ್ಟು ಬಡ್ಡಿ ಪಾವತಿ |
|---|---|
| 2022-23 | 25,255 |
| 2023-24 | 27,232 |
| 2024-25 | 32,347 |
| **ಒಟ್ಟು** | **84,834** |

ವರ್ಷದಿಂದ ವರ್ಷಕ್ಕೆ ರಾಜ್ಯದ ಅಭಿವೃದ್ಧಿ ಆದ್ಯತೆಗಳು ಹೆಚ್ಚಾಗುತ್ತಿದ್ದು, ಬಂಡವಾಳ ಯೋಜನೆಗಳಿಗೆ ಅಗತ್ಯ ಅನುದಾನ ಒದಗಿಸಲು ಸರ್ಕಾರದ ಸಾಲವು ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿದೆ. ಸರ್ಕಾರದ ಸಾಲ ಹೆಚ್ಚಾದಂತೆ ಬಡ್ಡಿ ಪಾವತಿಯು ಹೆಚ್ಚಾಗುತ್ತಿದೆ. ಹಿಂದಿನ ವರ್ಷಗಳಲ್ಲಿ ಸರ್ಕಾರವು ಪಡೆದಿರುವ ಸಾಲಗಳನ್ನು ಸಮಯಾನುಸಾರ ಮರುಪಾವತಿ ಮಾಡುತ್ತಿದ್ದು,

| | | |
|---|---|---|
| | | ಅದಕ್ಕೆ ಅನುಗುಣವಾಗಿ ಬಡ್ಡಿ ಪಾವತಿಯು ಕಡಿಮೆಯಾಗಿರುತ್ತದೆ.<br><br>ಸರ್ಕಾರವು ರಾಜ್ಯದ ಒಟ್ಟು ಋಣ ನಿರ್ವಹಣೆಯನ್ನು ಸುಸ್ಥಿರ ಮಟ್ಟದಲ್ಲಿ ನಿರ್ವಹಿಸುತ್ತಿದ್ದು, ರಾಜ್ಯದ ಒಟ್ಟು ಬಡ್ಡಿ ಪಾವತಿಯು ನಿಯಂತ್ರಣದಲ್ಲಿರುತ್ತದೆ.<br>ರಾಜ್ಯ ಸರ್ಕಾರವು ಕೇಂದ್ರ ಸರ್ಕಾರ ನಿಗದಿಪಡಿಸಿರುವ ಮಿತಿಯೊಳಗೆ ಸಾಲವನ್ನು ಪಡೆಯುವುದರ ಜೊತೆಗೆ ಅಭಿವೃದ್ಧಿ ಯೋಜನೆಗಳಿಗೂ ಅಗತ್ಯ ಅನುದಾನ ಒದಗಿಸುತ್ತಿದೆ. |
| ಊ) | ರಾಜ್ಯದ ಆರ್ಥಿಕ ಸ್ಥಿತಿಯನ್ನು ಸುಸ್ಥಿತಿಗೆ ತರುವ ಉದ್ದೇಶದಿಂದ ಮಧ್ಯಾವಧಿ ಹಾಗೂ ಧೀರ್ಘಾವಧಿ ಹಣಕಾಸು ಪುನರ್ ರಚನಾ ಯೋಜನೆಯನ್ನು ಸರ್ಕಾರ ರೂಪಿಸಿರುವುದೇ; ರೂಪಿಸಿದ್ದರೆ, ಅದರ ಮುಖ್ಯ ಅಂಶಗಳು ಯಾವುವು; ಮುಂದಿನ ದಿನಗಳಲ್ಲಿ ಸಾಲದ ಅವಲಂಬನೆ ಕಡಿಮೆ ಮಾಡಿ, ಆದಾಯ ಮೂಲಗಳನ್ನು ವಿಸ್ತರಿಸುವ ಸ್ಪಷ್ಟ ಕಾರ್ಯಯೋಜನೆಯನ್ನು ಸರ್ಕಾರ ರಚಿಸಿದೆಯೇ? | ರಾಜ್ಯದ ವಿತ್ತೀಯ ಪರಿಸ್ಥಿತಿಯನ್ನು ಸುಸ್ಥಿರ ಮಟ್ಟದಲ್ಲಿ ನಿರ್ವಹಿಸಲು ಸರ್ಕಾರವು ಮಧ್ಯಮಾವಧಿ ವಿತ್ತೀಯ ಯೋಜನೆಯನ್ನು ರೂಪಿಸಿರುತ್ತದೆ.<br><br>2026-27ರ ಮಧ್ಯಮಾವಧಿ ವಿತ್ತೀಯ ನೀತಿಯು, ಆರ್ಥಿಕ ಹೊಣೆಗಾರಿಕೆ ಅಧಿನಿಯಮದ ಮಾನದಂಡದಂತೆ ವಿತ್ತೀಯ ಕೊರತೆಯನ್ನು ಪಾಲಿಸುವುದರ ಜೊತೆಗೆ ಸ್ಥಿರ ಆರ್ಥಿಕ ಬೆಳವಣಿಗೆಗೆ ಉತ್ತೇಜನ ನೀಡುವುದು, ಸಾಮಾಜಿಕ ವಲಯದ ವೆಚ್ಚವನ್ನು ಸಂರಕ್ಷಿಸಿ, ಬಂಡವಾಳ ವೆಚ್ಚವನ್ನು ಹೆಚ್ಚಿಸುವ ಗುರಿ ಹೊಂದಿದೆ.<br>2026-27ರ ಮಧ್ಯಮಾವಧಿ ವಿತ್ತೀಯ ನೀತಿಯ ಪ್ರಮುಖ ಅಂಶಗಳು ಕೆಳಕಂಡಂತಿದೆ-<br><br>1. ಸಾರ್ವಜನಿಕ ಹೂಡಿಕೆಗಳನ್ನು ಹೆಚ್ಚಿಸಿ ಮೂಲಸೌಕರ್ಯ ಅಭಿವೃದ್ಧಿ, ರಸ್ತೆ ನಿರ್ಮಾಣ, ಇಂಧನ ಮತ್ತು ಇತರ ಉತ್ಪಾದಕ ವಲಯಗಳಿಗೆ ಆದ್ಯತೆ ನೀಡಲಾಗುವುದು.<br>2. ಸಾಮಾಜ ಕಲ್ಯಾಣ ಕಾರ್ಯಕ್ರಮಗಳು ಅಗತ್ಯ ಅನುದಾನ ಒದಗಿಸುವುದರ ಜೊತೆಗೆ ಅರ್ಹ ಫಲಾನುಭವಿಗಳ ಗುರುತಿಸುವಿಕೆ ಮತ್ತು ತಂತ್ರಜ್ಞಾನ ಆಧಾರಿತ ವ್ಯವಸ್ಥೆಗಳ ಮೂಲಕ ಸೋರಿಕೆ ತಡೆ ಕ್ರಮಗಳನ್ನು ಬಲಪಡಿಸಲಾಗುವುದು.<br>3. ಶಿಕ್ಷಣ, ಆರೋಗ್ಯ ಮತ್ತು ಕೌಶಲ್ಯಾಭಿವೃದ್ಧಿ ಕ್ಷೇತ್ರಗಳಿಗೆ ಆದ್ಯತೆ ನೀಡಲಾಗುವುದು.<br>4. ಕೈಗಾರಿಕಾ ಬೆಳವಣಿಗೆಗೆ ಉತ್ತೇಜನ ನೀಡಲು ಶ್ರೇಣಿ-2 ಮತ್ತು ಶ್ರೇಣಿ-3 ನಗರಗಳಲ್ಲಿ ಕೈಗಾರಿಕಾ ಕೇಂದ್ರಗಳು, ಲಾಜಿಸ್ಟಿಕ್ಸ್ ಪಾರ್ಕ್‌ಗಳು ಮತ್ತು ಸಂಪರ್ಕ ಮೂಲಸೌಕರ್ಯ ಅಭಿವೃದ್ಧಿಗೆ ಹೂಡಿಕೆ ಹೆಚ್ಚಿಸಲಾಗುವುದು.<br>5. ಎಲೆಕ್ಟ್ರಾನಿಕ್ಸ್, ಅರೆವಾಹಕಗಳು, ವಿದ್ಯುತ್ ಚಾಲಿತ ವಾಹನಗಳು ಮತ್ತು ಸ್ಟಾರ್ಟ್-ಅಪ್‌ಗಳಿಗೆ ಪ್ರೋತ್ಸಾಹ ನೀಡುವುದರ ಮೂಲಕ ಉದ್ಯೋಗಾವಕಾಶಗಳನ್ನು ಹೆಚ್ಚಿಸಲಾಗುವುದು.<br>6. ತೆರಿಗೆ ಆಡಳಿತ ಸುಧಾರಣೆ, ತೆರಿಗೆ ಅನುಪಾಲನೆ ಹೆಚ್ಚಿಸುವುದು ಹಾಗೂ ಬಳಕೆದಾರ ಶುಲ್ಕ ಮತ್ತು ಖನಿಜ ಸಂಪನ್ಮೂಲಗಳ ಮೂಲಕ ಹೆಚ್ಚುವರಿ ರಾಜಸ್ವ ಸಂಗ್ರಹಣೆಗೆ ಕ್ರಮ ಕೈಗೊಳ್ಳಲಾಗುವುದು. |

ಸಂಖ್ಯೆ: FD/28/2026-DS-BR-FINANCE DEPT.SEC

(ಸಿದ್ದರಾಮಯ್ಯ)
ಮುಖ್ಯಮಂತ್ರಿ